ಹಿಡಿದ ನಾಲ್ಕೈದು ವರ್ಷದ ಮಗುವಿನೊಂದಿಗೆ ಹೊರಬಂದಳು. ಕೂಸು ಕೊಸರಾಡುತ್ತ, ಸಣ್ಣಗೆ ಕಿರುಚುತ್ತಿತ್ತು. ಈ ಪುಟ್ಟ ಮಗು ಏತಕ್ಕೋ ಹಟ ಮಾಡುತ್ತಿತ್ತು. ಕಣ್ಣಿನಿಂದ ಒಸರುವ ಕಿರು ಹನಿಗಳು ಆಕೆಯ ರೆಪ್ಪೆಯನ್ನು ಒದ್ದೆಯಾಗಿಸಿದ್ದವು. ಎಲ್ಲವನ್ನೂ ಸಂಭಾಳಿಸಿಕೊಳ್ಳುತ್ತ ಬಂದ ಆಕೆ ಅಲ್ಲೇ ಪಕ್ಕದ ಸೀಟಿನ ಮೇಲೆ ಕುಳಿತು ನಿಟ್ಟುಸಿರು ತೆಗೆದಳು. ಕೂಸನ್ನು ತೊಡೆಯ ಮೇಲಿಟ್ಟುಕೊಂಡು, ಹಟವನ್ನು ಮುಂದುವರೆಸುತ್ತಿದ್ದ ಮಗುವಿಗೆ ಏಟು ಕೊಟ್ಟಳು. ಆ ಮಗು ಕಿಟಾರನೆ ಕಿರುಚಿ ರಗಳೆ ಮಾಡತೊಡಗಿತು. ಅವರೆಗೆ ಶಿಲ್ಪಸದೃಶವಾಗಿ ಕುಳಿತಿದ್ದ ಕೌಂಟರಿನ ಹುಡುಗಿ ಧಡ್ಡನೆ ಎದ್ದು ಆಕೆಗೆ ಏನನ್ನೋ ಬೈಯ್ದಳು. ಎಲ್ಲವೂ ಅಯೋಮಯವಾದಂತಾಗಿ ಆ ತರುಣಿ ಕಂಗೆಟ್ಟವಳಂತೆ ಅತ್ತಿತ್ತ ನೋಡಿ ಸಣ್ಣಗೆ ಕುಸುಗುಡತೊಡಗಿದಳು.

ಸಾಂಬಮೂರ್ತಿ ನಿಧಾನಕ್ಕೆ ಎದ್ದು ತಮ್ಮ ಕೈ ಚೀಲದಲ್ಲಿದ್ದ ನೀರಿನ ಬಾಟಲಿಯ ಬುರುಡೆ ಬಿಡಿಸಿ ಆಕೆಗೆ ಕೊಟ್ಟು, 'ನೀರು ಕುಡಿ, ಸುಧಾರಿಸ್ಕೋ' ಎಂದು ಅದೇ ಚೀಲವನ್ನು ತಡಕಾಡಿ ರಗಳೆ ಮಾಡುತ್ತಿದ್ದ ಆ ಮಗುವಿಗೆ ಚಿಕ್ಕದೊಂದು ಟೋಸ್ಟ್ ಮತ್ತು ಲೇಸ್ ಪ್ಯಾಕೆಟ್ ಕೊಟ್ಟು ಕೆನ್ನೆ ತಟ್ಟಿದರು. ಅದನ್ನು ಕಂಡ ಮಗು ಪಟ್ಟನೆ ರಗಳೆ ನಿಲ್ಲಿಸಿ ಸಾಂಬಮೂರ್ತಿ ಮುಖವನ್ನೇ ಅರೆ ಖುಷಿ, ಅರೆ ಸಂದೇಹದಲ್ಲಿ ನೋಡಿತು. ನೀರು ಕುಡಿದು ಸುಧಾರಿಸಿಕೊಂಡ ತರುಣಿಯ ಬಳಿ, 'ಮಗಳೇ, ಈ ಮಕ್ಕಳನ್ನು ಕಟ್ಟಿಕೊಂಡು ಒಬ್ಬಳೇ ಬಂದ ಹಾಗೇ ಕಾಣಿಸ್ತದೆ. ಯಾಕೆ, ಯಾರೂ ಜೊತೆಗೆ ಬರಲಿಲ್ಲವಾ?' ಎಂದು ಸಣ್ಣದಾಗಿ ಪ್ರಶ್ನಿಸಿದರು. 'ನನ್ನ ಹಣೆಬರಹ, ಗಂಡ ಇದ್ದೂ ಇಲ್ಲದ ಹಾಂಗೆ ಆಗಿದೆ. ಮನೆಯಲ್ಲಿ ಮಾವ, ಅತ್ತೆ ನದರಸೋದಿಲ್ಲ. ತೌರು ಮನೇರು ಹಚ್ಕೊಳ್ಳೋದಿಲ್ಲ. ಈ ಮಕ್ಳನ್ನ ಕಟ್ಕೊಂಡು ಹ್ಯಾಂಗೆ ಬದಕ್ಲಿ, ಇವನ್ನ ಕಟ್ಕೊಂಡು ಯಾವ್ದಾರೂ ಹೊಳೆ, ಬಾವಿ ಹಾರೋದೇ' ಎಂದು ಬಿಕ್ಕಿದಳು.

'ಅಳಬೇಡ, ಕಷ್ಟ ಯಾರಿಗೆ ಬರೋದಿಲ್ಲ? ಬದುಕು ಎಂದ ಮೇಲೆ ಇದ್ದದ್ದೇ ಇವೆಲ್ಲ. ಈ ಮಕ್ಕಳಿಗಾದ್ರೂ ಎಲ್ಲವನ್ನ ಸಹಿಸ್ಕೋಬೇಕು' ಎಂದು ಸಾಂತ್ವನ ಹೇಳಿದರು. ತುಸುಹೊತ್ತಿನಲ್ಲಿ ಅವಳ ಕುರಿತಾದ ವಿವರ ತಿಳಿದು, 'ತಪ್ಪು ತಿಳಿಬೇಡ, ನಾನು ನಿನ್ನ ಚಿಕ್ಕಪ್ಪ ಇದ್ದಹಾಗೆ. ನೀನು ಈ ಮಕ್ಕಳನ್ನ ಕಟ್ಟಿಕೊಂಡು ದೂರದ ಮನೆಗೆ ಹೋಗಬೇಕಲ್ವಾ? ಬಸ್ಸು ತಪ್ಪಿದರೆ ಕಷ್ಟವಾಗುತ್ತದೆ, ಬಾ' ಎಂದು ಆ ಬಾಲಕನ ಕೈ ಹಿಡಿದು ಅವಳ ಜೊತೆ ಹೊರನಡೆದರು.

ಸುಲೇಖನಲ್ಲಿ ಸಾಂಬಮೂರ್ತಿಯ ವರ್ತನೆಗಳು ಮತ್ತಷ್ಟು ವಿಸ್ಮಯ ಹುಟ್ಟಿಸುತ್ತಿದ್ದವು. ಆ ಬಗ್ಗೆ ಪೂರ್ತಿಯಾಗಿ ಯೋಚಿಸಲಾಗದಂತೆ ಖಾಸಗಿ ಬದುಕಿನ ರಗಳೆಗಳು ಅವನನ್ನ ಒಳಗೊಳಗೇ ಹಣ್ಣುಮಾಡುತ್ತಿದ್ದವು.

ಅಪ್ಪಅಮ್ಮ ಕಷ್ಟಪಟ್ಟು ಕಳಿಸಿದ ದುಡ್ಡಿನಲ್ಲಿ ಓದು ಮುಗಿಸಿ, ದೊಡ್ಡ ಕಂಪನಿಗೆ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾದ ಸುಲೇಖನಿಗೆ ಕೈತುಂಬ ಸಂಬಳ ತರುವ ಕೆಲಸದ ಆಕರ್ಷಣೆಯೋ, ಇಷ್ಟು ದಿನ ಕೈ, ಬಾಯಿ ಕಟ್ಟಿಕೊಂಡಂತೆ ಬದುಕಿದ ರೀತಿಗೆ ವಿರುದ್ಧವಾಗಿ ದೊರೆತ ಹೊಸ ಬದುಕಿನ ರುಚಿಯೋ? ಹಿಂದಿನದೆಲ್ಲವನ್ನೂ ಮರೆಸಿಬಿಟ್ಟಿತ್ತು. ಎಷ್ಟರಮಟ್ಟಿಗೆ ಅಂದರೆ ಹುಟ್ಟಿಬೆಳೆದ ಊರು, ಅಪ್ಪಅಮ್ಮ, ಓದಿದ ಶಾಲೆ, ಹೈಸ್ಕೂಲು, ಕಾಲೇಜುಗಳೆಲ್ಲ ಹೇವರಿಕೆ ಹುಟ್ಟಿಸುವ ಮನಃಸ್ಥಿತಿಯನ್ನು ತಂದಿದ್ದವು. ಹಣ, ನಿತ್ಯದ ರಂಗೀಲಾ ಕ್ಷಣ, ಯೌವನದ ಉನ್ಮಾದ ಅವನ ಹಿಂದಿನ ಜೀವನವನ್ನೇ ಮರೆಸಿತ್ತು. ಒಬ್ಬನೇ ಮಗನನ್ನು ಪ್ರತಿಕ್ಷಣದಲ್ಲೂ ನೆನಪಿಸಿಕೊಳ್ಳುವ ಅಪ್ಪಅಮ್ಮ ಅವನಿಗೆ ಪ್ರಯೋಜನಕ್ಕೆ ಬಾರದ ಗೊಡ್ಡು ಪ್ರಾಣಿಗಳಂತೆ ತೋರುತ್ತಿದ್ದರು. ಆ ಬಿಸಿಯಲ್ಲೇ ಅವನಿಗೆ ಅಂಟಿಕೊಂಡವಳು ಅವನದೇ ಕಂಪನಿಯಲ್ಲಿದ್ದ ವೈಷ್ಣವಿ. ಅರಳುಹುರಿದಂತೆ ಮಾತನಾಡುತ್ತ, ಎದುರಿನಲ್ಲಿದ್ದವರಿಗೆ ಬೇಕಾದಂತೆ ಗಾಸಿಪ್ ಮಾಡುತ್ತ, ಬೋಲ್ಡ್ ಅಂಡ್ ಡೇರ್ ಎನ್ನುವ ಹೆಗ್ಗಳಿಕೆಯನ್ನು ಪಡೆದುಕೊಂಡ ಆಕೆಗೆ ಸುಲೇಖ ವಶವಾಗುವುದಕ್ಕೆ ಹೆಚ್ಚು ಕಾಲ ಹಿಡಿಯಲಿಲ್ಲ. ಅಲ್ಲಿಯವರೆಗೆ ವರ್ಷದಲ್ಲಿ ಒಂದೆರಡು ಸಾರಿಯಾದರೂ ಮನೆಗೆ ಹೋಗುತ್ತ, ಅಪ್ಪ ಬರೆದ ಪತ್ರಕ್ಕೆ ಎರಡು ತಿಂಗಳಿಗೊಮ್ಮೆಯಾದರೂ ಉತ್ತರಿಸುತ್ತಿದ್ದ ಸುಲೇಖ ಅವಳ ಜೊತೆ ಮದುವೆಯಾದದ್ದನ್ನು ನಂತರ ಪತ್ರದ ಮೂಲಕ ತಿಳಿಸಿದ್ದ. ಆಕ್ಟೋಪಸ್‌ನಂತೆ ಎಲ್ಲ ರೀತಿಯಲ್ಲೂ